ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣಿ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೭ ಆಗಸ್ಟ್ ೨೦೨೩ ಸಂಚಿಕೆ ೦೧

ನೀವು ನಿಸರ್ಗದ ಜೊತೆಗಿನ ಸಂಪರ್ಕ ಕಡಿದುಕೊಂಡರೆ ಮಾನವತೆಯ ಜೊತೆಗಿನ ಸಂಪರ್ಕವನ್ನೂ ಕಡಿದುಕೊಳ್ಳುತ್ತೀರಿ. ನಿಸರ್ಗದ ಜೊತೆ ಸಂಬಂಧವಿಲ್ಲದಿದ್ದರೆ ನೀವು ಹಂತಕರಾಗುತ್ತೀರಿ;ನೀರುನಾಯಿ ಮರಿಗಳನ್ನು, ತಿಮಿಂಗಿಲಗಳನ್ನು, ಡಾಲ್ಫಿನ್‌ಗಳನ್ನು ಕೊಲ್ಲುತ್ತೀರಿ. ಮನುಷ್ಯ ತನ್ನ ಲಾಭಕ್ಕಾಗಿ, ಆಮೋದಕ್ಕಾಗಿ ಅಥವಾ ಆಹಾರಕ್ಕಾಗಿ ಇಲ್ಲವೆ ಜ್ಞಾನದ ಸಲುವಾಗಿ ಕೊಲ್ಲುತ್ತಾನೆ. ಆಗ ನಿಸರ್ಗ ನಿಮ್ಮ ಬಗ್ಗೆ ಭಯಪಟ್ಟು ತನ್ನ ಚೆಲುವನ್ನು ಮುಚ್ಚಿಡುತ್ತದೆ. ನೀವು ಕಾಡಿನಲ್ಲಿ ನಿಡಿದಾದ ನಡಿಗೆಗೆ ಹೋಗಬಹುದು ಅಥವಾ ಸೊಬಗಿನ ತಾಣಗಳಲ್ಲಿ ಶಿಬಿರ ಹೂಡಬಹುದು: ಆದರೆ ನೀವೊಬ್ಬ ಹಂತಕ; ಹೀಗಾಗಿ ಅವುಗಳ ಜೊತೆಗಿನ ಸ್ನೇಹದಿಂದ ವಂಚಿತರಾಗುತ್ತೀರಿ.

4 ಎಪ್ರಿಲ್ 1975 – ಜೆ ಕೃಷ್ಣಮೂರ್ತಿ

ಬಿಡುಗಡೆ ಮತ್ತು ಶಿಸ್ತನ್ನು ಅರ್ಥಮಾಡಿಕೊಳ್ಳುವುದು

ಶಿಸ್ತಿನ ಸಮಸ್ಯೆ ನಿಜಕ್ಕೂ ಸಂಕೀರ್ಣ. ಏಕೆಂದರೆ ಯಾವುದಾದರೊಂದು ಬಗೆಯ ಶಿಸ್ತಿನ ಮೂಲಕ ನಾವು ಬಿಡುಗಡೆ ಕಂಡುಕೊಳ್ಳಬಹುದೆಂದು ನಮ್ಮಲ್ಲಿ ಹೆಚ್ಚಿನವರು ಭಾವಿಸುತ್ತಾರೆ. ಶಿಸ್ತು ಪ್ರತಿರೋಧವನ್ನು ರೂಢಿಸುವುದಲ್ಲವೆ? ಪ್ರತಿರೋಧದ ಮುಖೇನ, ನಾವು ತಪ್ಪು ಎಂದು ಭಾವಿಸಿದ ಯಾವುದೋ ಒಂದರ ವಿರುದ್ಧ ನಮ್ಮೊಳಗೆ ಒಂದು ತಡೆಗೋಡೆ ಕಟ್ಟುವ ಮೂಲಕ ಪೂರ್ಣ ಜೀವನವನ್ನು ಅರಿತು ಬಾಳಬಹುದು ಎಂದು ತಿಳಿಯುತ್ತೇವೆ; ಆದರೆ ಅದು ವಸ್ತುಸ್ಥಿತಿಯಲ್ಲ ತಾನೇ?ನೀವು ಹೆಚ್ಚು ಹೆಚ್ಚು ಪ್ರತಿರೋಧ ಒಡ್ಡಿದಷ್ಟೂ, ಹೆಣಗಿದಷ್ಟೂ ಅದನ್ನು ಕಡಿಮೆ ಅರಿತುಕೊಂಡಿರುತ್ತೀರಿ. ಖಂಡಿತಕ್ಕೂ ಯೋಚಿಸಲು, ಕಂಡು ಹಿಡಿಯಲು ನಿಜವಾದ ಸ್ವಾತಂತ್ರ್ಯ ಇರುವಾಗ ಮಾತ್ರವೇ ಏನನ್ನಾದರೂ ಕಂಡುಹಿಡಿಯಬಹುದು.

ಬಿಡುಗಡೆ ಒಂದು ಚೌಕಟ್ಟಿನಲ್ಲಿ ಇರುವಂಥದ್ದಲ್ಲ. ನಾವು ಬಹಳ ಮಂದಿ ಒಂದು ಚೌಕಟ್ಟಿನೊಳಗಡೆ, ವಿಚಾರಗಳಿಂದ ಆವರಿಸಿದ ಜಗತ್ತಿನಲ್ಲಿ ಬದುಕುತ್ತೇವೆ. ಅಲ್ಲವೇ? ಉದಾಹರಣೆಗೆ, ಯಾವುದು ಸರಿ, ಯಾವುದು ತಪ್ಪು, ಯಾವುದು ಕೆಟ್ಟದ್ದು, ಯಾವುದು ಲಾಭದಾಯಕ ಎಂದು ನಿಮ್ಮ ಹೆತ್ತವರು ಮತ್ತು ಶಿಕ್ಷಕರು ನಿಮಗೆ ಹೇಳುತ್ತಾರೆ. ಜನ ಏನು ಹೇಳುತ್ತಾರೆ, ಧರ್ಮಗುರುಗಳು ಏನು ಹೇಳುತ್ತಾರೆ, ಸಂಪ್ರದಾಯ ಏನು ಹೇಳುತ್ತದೆ ಮತ್ತು ಶಾಲೆಯಲ್ಲಿ ನೀವೇನು ಕಲಿತಿರಿ ಎಂಬುದು ನಿಮಗೆ ಗೊತ್ತಿದೆ. ಇದೆಲ್ಲವೂ ನಿಮ್ಮ ಬದುಕಿಗೆ ಆವರಣವಾಗಿ ಮಾರ್ಪಡುತ್ತದೆ. ನೀವು ಈ ಆವರಣದ ಒಳಗಡೆ ಬದುಕುತ್ತಿರುತ್ತೀರಿ; ಈ ಆವರಣದಲ್ಲಿದ್ದುಕೊಂಡು ನಾನು ಸ್ವತಂತ್ರ ಎಂದು ನೀವು ಹೇಳುತ್ತೀರಿ. ನೀವು ಸ್ವತಂತ್ರರೇ? ಸೆರೆಮನೆಯಲ್ಲಿರುವಷ್ಟು ಕಾಲ ಯಾವನಾದರೂ ಸ್ವತಂತ್ರನಾಗಿರಲು ಸಾಧ್ಯವೇ? ಹೀಗಾಗಿ ಸಂಪ್ರದಾಯದ, ಸೆರೆಮನೆಯ ಗೋಡೆಗಳನ್ನೊಡೆದು ವಾಸ್ತವ ಯಾವುದು, ನಿಜ ಯಾವುದು ಎಂಬುದನ್ನು ಸ್ವತಃ ಕಂಡುಕೊಳ್ಳಬೇಕು. ವ್ಯಕ್ತಿ ಸ್ವತಃ ಪ್ರಯೋಗ ಮಾಡಿ ಕಂಡುಕೊಳ್ಳಬೇಕಲ್ಲವೆ? ಯಾವನೋ ಒಬ್ಬ ವ್ಯಕ್ತಿಯನ್ನು ಅನುಸರಿಸಕೂಡದು. ಆ ವ್ಯಕ್ತಿ ಉದಾತ್ತನಿರಬಹುದು, ಉತ್ತಮನಿರಬಹುದು, ಕುತೂಹಲಕಾರಿ ಇರಬಹುದು. ಅವನ ಸಾನ್ನಿಧ್ಯದಲ್ಲಿ ನೀವು ಬಹಳ ಸಂತೋಷವಾಗಿರಬಹುದು. ಆದರೆ ಹಿಂಬಾಲಿಸಕೂಡದು. ಸಂಪ್ರದಾಯ ಸೃಷ್ಟಿಸಿದ ಸಕಲ ಮೌಲ್ಯಗಳನ್ನು, ಜನರು ಹೇಳಿರುವ ಎಲ್ಲವೂ ಉತ್ತಮ, ಪ್ರಯೋಜನಕಾರಿ, ಉಪಯುಕ್ತ ಎಂಬುದನ್ನೆಲ್ಲ ಒಪ್ಪಿಕೊಳ್ಳದೆ ಪರೀಕ್ಷಿಸುವುದು ಅತ್ಯಂತ ಮಹತ್ತ್ವದ ಸಂಗತಿ. ನೀವು ಒಪ್ಪಿಕೊಂಡಗಳಿಗೆಯಿಂದ ರೂಢಿಗೆ ಬದ್ಧರಾಗುತ್ತೀರಿ, ಅನುಕರಿಸಲು ಆರಂಭಿಸುತ್ತೀರಿ; ರೂಢಿಬದ್ಧತೆ, ಅನುಕರಣೆ, ಹಿಂಬಾಲಿಸುವಿಕೆ ಎಂದೂ ನಿಮಗೆ ಸಂತೋಷ ಮತ್ತು ಸ್ವಾತಂತ್ರ್ಯ ನೀಡದು.

ನಿಮ್ಮನ್ನು ಶಿಸ್ತಿಗೆ ಒಳಪಡಿಸಬೇಕು ಎಂದು ನಿಮ್ಮ ಹಿರಿಯರು ಹೇಳುತ್ತಾರೆ. ನೀವೇ ನಿಮ್ಮ ಮೇಲೆ ಶಿಸ್ತನ್ನು ಹೇರುತ್ತೀರಿ. ಅಂತೆಯೇ ಹೊರಗಿನಿಂದಲೂ ಅನ್ಯರು ನಿಮ್ಮ ಮೇಲೆ ಶಿಸ್ತನ್ನು ಹೇರುತ್ತಾರೆ. ಮುಖ್ಯವಾದ ಸಂಗತಿ ಎಂದರೆ ಯೋಚಿಸಲು, ಶೋಧಿಸಲು ಸ್ವಾತಂತ್ರ್ಯ ಬೇಕು.ಆಗ ನೀವು ನಿಮ್ಮಷ್ಟಕ್ಕೆ ಎಲ್ಲವನ್ನೂ ಕಂಡುಕೊಳ್ಳುತ್ತೀರಿ.



ದುರದೃಷ್ಟವಶಾತ್, ಬಹಳಷ್ಟು ಜನ ಆಲೋಚಿಸಲು, ಕಂಡುಕೊಳ್ಳಲು ಬಯಸುವುದಿಲ್ಲ. ಅವರ ಮನಸ್ಸುಗಳು ಮುಚ್ಚಿಕೊಂಡಿವೆ. ಆಳವಾಗಿ ಆಲೋಚಿಸುವುದು, ವಿಷಯಗಳ ಆಳಕ್ಕಿಳಿಯುವುದು ಮತ್ತು ಯಾವುದು ನಿಜ ಎಂದು ಸ್ವತಃ ಕಂಡುಕೊಳ್ಳುವುದು ತುಂಬಾ ಕಷ್ಟ. ಅದಕ್ಕೆ ಚುರುಕಾದ ಪರಿಭಾವನೆ, ನಿರಂತರ ಅನ್ವೇಷಣೆ ಬೇಕು. ಆದರೆ ಬಹಳಷ್ಟು ಜನರಲ್ಲಿ ಈ ಬಗ್ಗೆ ಒಲವೂ ಇಲ್ಲ, ಚೈತನ್ಯವೂ ಇಲ್ಲ. 'ನನಗಿಂತ ಚೆನ್ನಾಗಿ ನಿಮಗೇ ಗೊತ್ತಿದೆ; ನೀವೇ ನನ್ನ ಗುರು; ನನ್ನ ಶಿಕ್ಷಕ, ನಾನು ನಿಮ್ಮನ್ನು ಅನುಸರಿಸುತ್ತೇನೆ' ಎಂದು ಅವರು ಹೇಳುತ್ತಾರೆ.ಹೀಗಾಗಿ ತೀರ ಚಿಕ್ಕ ಪ್ರಾಯದಿಂದಲೇ ನೀವು ಕಂಡುಕೊಳ್ಳಲು ಮುಕ್ತರಾಗಿರಬೇಕು. 'ವಿಧಿ ನಿಷೇಧ'ಗಳ ಯಾವುದೇ ಆವರಣ ಗೋಡೆಯ ಒಳಗಿರಬಾರದು; ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂದು ಸತತವಾಗಿ ನಿಮಗೆ ಹೇಳುವುದಾದರೆ ನಿಮ್ಮ ಬುದ್ಧಿಶಕ್ತಿಯ ಗತಿಏನಾಗಬೇಡ? ನೀವು ವಿಚಾರಶೂನ್ಯ ಜಂತುವಾಗಿ ಯಾವುದೋ ಕೆಲಸಕ್ಕೆ ಸೇರಿಕೊಳ್ಳುತ್ತೀರಿ, ಯಾರನ್ನು ಮದುವೆಯಾಗಬೇಕು ಅಥವಾ ಯಾರನ್ನು ಮದುವೆಯಾಗಬಾರದು ಎಂದು ನಿಮ್ಮ ಹೆತ್ತವರು ಹೇಳಿದ ಹಾಗೆ ಮಾಡುತ್ತೀರಿ; ಅದು ನಿಜಕ್ಕೂ ಧೀಮಂತಿಕೆಯ ಕೆಲಸವಲ್ಲ. ನೀವು ಪರೀಕ್ಷೆಗಳನ್ನು ಪಾಸು ಮಾಡಿರಬಹುದು, ಚೆನ್ನಾಗಿರಬಹುದು, ಒಳ್ಳೆಯ ಬಟ್ಟೆ, ಸಾಕಷ್ಟು ಆಭರಣಗಳು ನಿಮ್ಮಲ್ಲಿರಬಹುದು. ನಿಮಗೆ ಸಾಕಷ್ಟು ಸ್ನೇಹಿತರು ಇರಬಹುದು. ಒಳ್ಳೆಯ ಗೌರವ ಸಿಗಬಹುದು; ಆದರೆ ಎಲ್ಲಿಯತನಕ ನೀವು ಸಂಪ್ರದಾಯಶರಣರಾಗಿರುತ್ತೀರೋ ಅಲ್ಲಿಯವರೆಗೆ ನಿಮ್ಮಲ್ಲಿ ಧೀಮಂತಿಕೆ ಇರಲಾರದು.ನೀವು ಪ್ರಶ್ನಿಸಲು ಸ್ವತಂತ್ರರಿದ್ದಾಗ, ಯೋಚಿಸಿ, ಶೋಧಿಸಲು ಸ್ವತಂತ್ರರಿದ್ದಾಗ, ಧೀಮಂತಿಕೆ ಒಡಮೂಡುತ್ತದೆ. ಆಗ ನಿಮ್ಮ ಮನಸ್ಸು ತುಂಬಾ ಕ್ರಿಯಾಶೀಲವಾಗಿರುತ್ತದೆ, ಚುರುಕಾಗಿರುತ್ತದೆ; ನಿಚ್ಚಳವಾಗಿರುತ್ತದೆ. ಆಗ ನೀವು ಓರ್ವ ಸಮನ್ವಿತ ವ್ಯಕ್ತಿಯಾಗುತ್ತೀರಿ, ಏನು ಮಾಡಬೇಕು ಎಂದು ತಿಳಿಯದ, ಅಂತರಂಗದಲ್ಲಿ ಒಂದು ಯೋಚಿಸಿ ಬಹಿರಂಗದಲ್ಲಿ ಇನ್ನೊಂದಕ್ಕೆ ಶರಣಾಗುವ, ಹೆದರಿಕೊಂಡ ವ್ಯಕ್ತಿಯಾಗಿರುವುದಿಲ್ಲ.

ನೀವು ಸಂಪ್ರದಾಯದಿಂದ ದೂರ ಸರಿದು ನಿಮ್ಮದೇ ನೆಲೆಯಲ್ಲಿ ಬದುಕಬೇಕೆಂದು ಬುದ್ಧಿಶಕ್ತಿ ಬಯಸುತ್ತದೆ; ಆದರೆ ನೀವೇನು ಮಾಡಬೇಕು ಮತ್ತು ಏನು ಮಾಡಬಾರದು ಎಂದು ನಿಮ್ಮ ತಂದೆ ತಾಯಿಗಳ ವಿಚಾರಗಳಿಂದ, ಸಮಾಜದ ಸಂಪ್ರದಾಯಗಳಿಂದ ಆವೃತರಾಗಿದ್ದೀರಿ. ಹೀಗಾಗಿ ನಿಮ್ಮೊಳಗೇ ಒಂದು ಸಂಘರ್ಷ ನಡೆಯುತ್ತಿದೆ ಅಲ್ಲವೇ? ನೀವೆಲ್ಲ ಚಿಕ್ಕವರಿದ್ದೀರಿ, ಆದರೆ ಇದರ ಬಗ್ಗೆ ಅರಿವಿರಲಾರದಷ್ಟು ಚಿಕ್ಕವರಲ್ಲ. ನೀವೇನೋ ಮಾಡಬೇಕೆಂದಿದ್ದೀರಿ, ಆದರೆ ನಿಮ್ಮ ಹೆತ್ತವರು ಮತ್ತು ಶಿಕ್ಷಕರು 'ಬೇಡ' ಎನ್ನುತ್ತಾರೆ. ಹೀಗಾಗಿ ಒಳಗೇ ಒಂದು ತುಮುಲ ನಡೆದಿದೆ; ಎಲ್ಲಿಯತನಕ ನೀವು ಆ ತೊಳಲಾಟವನ್ನು ಪರಿಹರಿಸಿಕೊಳ್ಳುವುದಿಲ್ಲವೋ ಅಲ್ಲಿಯತನಕ ಆ ಸಂಘರ್ಷ, ನೋವು, ದುಃಖ ಏನಾದರೂ ಮಾಡಬೇಕೆಂಬ ನಿರಂತರ ಬಯಕೆ ಮತ್ತು ಹಾಗೆ ಮಾಡಲು ಬಿಡದ ನಿರ್ಬಂಧ ಇವುಗಳಲ್ಲಿ ಸಿಲುಕಿಕೊಳ್ಳುತ್ತೀರಿ.

ಇದನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ನಿಮಗೆ ತಿಳಿಯುವ ಸಂಗತಿ ಎಂದರೆ ಶಿಸ್ತು ಮತ್ತು ಸ್ವಾತಂತ್ರ್ಯ ಎರಡೂ ಪರಸ್ಪರ ವ್ಯತಿರಿಕ್ತ. ನಿಜವಾದ ಬಿಡುಗಡೆಯನ್ನು ಅರಸುವಲ್ಲಿ ತೀರ ಭಿನ್ನವಾದ ಒಂದು ಪ್ರಕ್ರಿಯೆ ಹುದುಗಿದ್ದು ಅದು ತನ್ನದೇ ಆದ ಸ್ಪಷ್ಟತೆಗಳನ್ನು ಹೊಂದಿದೆ. ಹೀಗಾಗಿ ಕೆಲವು ಕೆಲಸಗಳನ್ನು ನೀವು ಮಾಡುವಂತಿಲ್ಲ.ನೀವು ಎಳೆಯವರಾಗಿರುವಾಗ ಜೀವನದಲ್ಲಿ ನಿಜವಾಗಿಯೂ ನೀವೇನು ಮಾಡಬೇಕೆಂದಿದ್ದೀರಿ ಎಂಬುದನ್ನು ಕಂಡುಕೊಳ್ಳಲು ನೀವು ಸ್ವತಂತ್ರರಿರಬೇಕು ಮತ್ತು ಕಂಡುಕೊಳ್ಳಲು ನಿಮಗೆ ನೆರವು ಸಿಗಬೇಕು.

ನೀವು ಎಳೆಯವರಿರುವಾಗ ಕಂಡುಕೊಳ್ಳದಿದ್ದರೆ, ನೀವೆಂದೂ ಕಂಡುಕೊಳ್ಳಲಾರಿರಿ. ನೀವೆಂದೂ ಮುಕ್ತ ಮತ್ತು ಸಂತೋಷಭರಿತ ವ್ಯಕ್ತಿಗಳಾಗಲಾರಿರಿ. ಈಗಲೇ ಬೀಜ ಬಿತ್ತಬೇಕು. ಈಗಲೇ ನೀವು ಮುಂತೊಡಗುವಿಕೆಯಲ್ಲಿ ಮಗ್ನರಾಗಬೇಕು.

ನೀವು ದಾರಿಯಲ್ಲಿ ಹೋಗುವ ತಲೆಯ ಮೇಲೆ ಭಾರಿ ಭಾರ ಹೊತ್ತ ಹಳ್ಳಿಯವರನ್ನು ಕಂಡಿದ್ದೀರಲ್ಲವೇ? ಅವರ ಬಗ್ಗೆ ನಿಮ್ಮ ಭಾವನೆ ಏನು? ಹರಿದ ಕೊಳಕು ಬಟ್ಟೆಗಳ, ಹಸಿದ, ಬಿಡುಗಾಸಿಗಾಗಿ ದಿನದಿನವೂ ದುಡಿವ ಆ ಬಡಮಹಿಳೆಯರ ಬಗ್ಗೆ ನಿಮ್ಮಲ್ಲಿ ಯಾವ ಭಾವನೆ ಇದೆ? ಅಥವಾ ನಿಮ್ಮ ಬಗ್ಗೆ ನೀವೇ ಬಹಳ ಕಾಳಜಿ ಮಾಡುತ್ತೀರಾ? ಬಹಳ ಹೆದರಿದ್ದೀರಾ? ನಿಮ್ಮ ಪರೀಕ್ಷೆಗಳ ಬಗ್ಗೆ, ನಿಮ್ಮ ನೋಟಗಳ ಬಗ್ಗೆ, ನಿಮ್ಮ ಸೀರೆಗಳ ಬಗ್ಗೆ ನೀವು ಗಮನ ಕೊಡುತ್ತಿಲ್ಲ ಎಂದು ಅನ್ನಿಸುತ್ತದೆಯೇ? ನೀವು ಅವರಿಗಿಂತ ತುಂಬ ಮೇಲು ಎಂದು ಅನ್ನಿಸುತ್ತದೆಯೇ? ನೀವು ಮೇಲ್ವರ್ಗಕ್ಕೆ ಸೇರಿದವರು ಆದುದರಿಂದ ಅವರ ಬಗ್ಗೆ ಯಾವುದೆ ಗೌರವ ಇಟ್ಟುಕೊಳ್ಳಬೇಕಾಗಿಲ್ಲ ಎಂದು ಅನ್ನಿಸುತ್ತದೆಯೇ? ಅವರು ಹೋಗುತ್ತಿರುವಾಗ ನಿಮಗೇನು ಅನ್ನಿಸುತ್ತದೆ? ಅವರಿಗೆ ಸಹಾಯ ಮಾಡಬೇಕು ಎಂದು ಅನ್ನಿಸುವುದಿಲ್ಲವೇ? ಇಲ್ಲವೇ? ಅದು ನೀವು ಹೇಗೆ ಯೋಚಿಸುತ್ತಿದ್ದೀರಿ ಎಂಬುದನ್ನು ಸೂಚಿಸುತ್ತದೆ. ಶತಮಾನಗಳ ಸಂಪ್ರದಾಯದಿಂದ, ನಿಮ್ಮ ತಂದೆ ತಾಯಿಗಳ ಮಾತುಗಳಿಂದ ನೀವು ಮಂದ ಬುದ್ಧಿಯವರಾದಿರಾ? ಒಂದು ನಿರ್ದಿಷ್ಟ ವರ್ಗಕ್ಕೆ ಸೇರಿದವರೆಂಬ ಪ್ರಜ್ಞೆಯಿಂದಾಗಿ ಹಳ್ಳಿಯವರನ್ನು ನೋಡಬಾರದೆಂಬ ಧೋರಣೆ ನಿಮ್ಮಲ್ಲಿದೆ ಅಲ್ಲವೆ? ನಿಮ್ಮ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಬಗ್ಗೆ ನೀವು ಅಷ್ಟೊಂದು ಕುರುಡಾಗಿದ್ದೀರಾ?

ಇದು ಭಯ - ಹೆತ್ತವರು ಏನು ಹೇಳುತ್ತಾರೋ ಎಂಬ ಭಯ, ಶಿಕ್ಷಕರು ಏನು ಹೇಳುತ್ತಾರೋ ಎಂಬ ಭಯ, ಸಂಪ್ರದಾಯದ ಭಯ, ಜೀವನದ ಭಯ. ಈ ಭಯ ಕ್ರಮೇಣ ಸೂಕ್ಷ್ಮಸಂವೇದನೆಯನ್ನು ನಾಶಮಾಡುತ್ತದೆ. ಅಲ್ಲವೆ? ಸೂಕ್ಷ್ಮಸಂವೇದಿಯಾಗುವುದು ಎಂದರೆ ಭಾವಿಸುವುದು, ಅನುಭವ ಪಡೆಯುವುದು, ನೋಯುವವರ ಬಗ್ಗೆ ಸಹಾನುಭೂತಿ ಹೊಂದುವುದು, ಪ್ರೀತಿ ತೋರುವುದು, ಸುತ್ತ ನಡೆಯುವ ವಿದ್ಯಮಾನಗಳ ಬಗ್ಗೆ ಅರಿವು ಹೊಂದುವುದು. ದೇವಾಲಯದ ಗಂಟೆ ಬಾರಿಸುವಾಗ ಅದರ ಅರಿವಾಗುವುದೇ ನಿಮಗೆ? ನೀವು ಆ ಸದ್ದನ್ನು ಆಲಿಸುತ್ತೀರಾ? ನೀರಿನ ಮೇಲೆ ಬೀಳುವ ಸೂರ್ಯಕಿರಣವನ್ನು ಎಂದಾದರೂ ನೋಡಿದ್ದೀರಾ? ಶೋಷಕರು ಶತಮಾನಗಳಿಂದ ಶೋಷಣೆ ಮಾಡಿದ, ನಿಯಂತ್ರಿಸಿದ ಬಡಜನರ ಹಾಗೂ ಹಳ್ಳಿಗರ ಬಗ್ಗೆ ನಿಮ್ಮಲ್ಲಿ ಅರಿವಿದೆಯೇ? ಒಬ್ಬ ಸೇವಕ ಭಾರಿ ತೂಕದ ಜಮಾಖಾನ ಕೊಂಡೊಯ್ಯುವಾಗ ನೀವು ಅವನಿಗೆ ಸಹಾಯಹಸ್ತ ನೀಡುವಿರಾ?

ಇದೆಲ್ಲವೂ ಸೂಕ್ಷ್ಮಸಂವೇದನೆ. ಆದರೆ ನೋಡಿ, ಶಿಸ್ತಿಗೆ ಒಳಪಟ್ಟಾಗ, ಭಯಪಟ್ಟಾಗ ಅಥವಾ ತನ್ನ ಬಗ್ಗೆ ತಾನೇ ಕಾಳಜಿ ಉಳ್ಳವನಾದಾಗ ಸೂಕ್ಷ್ಮಸಂವೇದನೆ ನಾಶವಾಗುತ್ತದೆ. ನಿಮ್ಮ ನೋಟಗಳ ಬಗ್ಗೆ, ಸೀರೆಗಳ ಬಗ್ಗೆ ಮತ್ತು ಸದಾ ತನ್ನ ಬಗ್ಗೆ ಕಾಳಜಿ, ಚಿಂತೆ ಮಾಡುವುದು, ನಾವು ಹೆಚ್ಚಿನವರು ಒಂದಲ್ಲ ಒಂದು ಬಗೆಯಲ್ಲಿ ಹೀಗೆ ಮಾಡುತ್ತೇವೆ ಅಂದರೆ ಅಸೂಕ್ಷ್ಮಮರಾಗಿದ್ದೇವೆ ಎಂದರ್ಥ. ಏಕೆಂದರೆ ಮನಸ್ಸು ಮತ್ತು ಹೃದಯ ಆವೃತವಾಗಿರುತ್ತದೆ. ವ್ಯಕ್ತಿ ಚೆಲುವನ್ನು ಆಸ್ವಾದಿಸುವ ಗುಣವನ್ನೇ ಕಳೆದುಕೊಂಡು ಬಿಡುತ್ತಾನೆ.ನಿಜಕ್ಕೂ ಮುಕ್ತನಾಗಲು ಮಹತ್ತರವಾದ ಸಂವೇದನಾಶೀಲತೆ ಬೇಕು ಎಂದರ್ಥ. ಸ್ವಹಿತಾಸಕ್ತಿ ಅಥವಾ ಶಿಸ್ತಿನ ವಿವಿಧ ಗೋಡೆಗಳಿಂದ ನೀವು ಆವರಿಸಲ್ಪಟ್ಟಿದ್ದರೆ ಬಿಡುಗಡೆ ಇರುವುದಿಲ್ಲ. ಎಲ್ಲಿಯವರೆಗೆ ನಿಮ್ಮ ಬದುಕು ಅನುಕರಣೆಯ ಪ್ರಕ್ರಿಯೆಯಾಗಿರುತ್ತದೋ ಅಲ್ಲಿಯವರೆಗೆ ಸಂವೇದನಾಶೀಲತೆ, ಸ್ವಾತಂತ್ರ್ಯ ಇರುವುದಿಲ್ಲ. ನೀವು ಇಲ್ಲಿರುವಾಗ, ಸ್ವಾತಂತ್ರ್ಯದ ಬೀಜವನ್ನು ನಿಮ್ಮಲ್ಲಿ ಬಿತ್ತುವುದು ಅಂದರೆ ನಿಮ್ಮ ಧೀಶಕ್ತಿಯನ್ನು ಜಾಗೃತಗೊಳಿಸುವುದು ತುಂಬಾ ಮುಖ್ಯವಾಗುತ್ತದೆ; ಏಕೆಂದರೆ ಆ ಧೀಮಂತಿಕೆಯಿಂದ ನೀವು ಜೀವನದ ಎಲ್ಲ ಸಮಸ್ಯೆಗಳನ್ನು ಎದುರಿಸಬಹುದು.

ಕೃತಿ : ಹೊಸ ಬದುಕಿಗೆ ಅಭಿಮುಖವಾಗಿ (ಅಧ್ಯಾಯ ೪)
ಮೂಲ: LIFE AHEAD
ಅನುವಾದ : ಡಾ. ಮಹಾಬಲೇಶ್ವರ ರಾವ್

ನೋವನ್ನು ದೂರವಿಡುವುದೇ ಸಂಗ್ರಹಣೆಯ ಉದ್ದೇಶವಾಗಿದ್ದರೂ ಸಂಗ್ರಹಣೆಯ ಪ್ರಕ್ರಿಯೆಯಲ್ಲಿಯೇ ನೋವು ಅಂತರ್ಗತವಾಗಿದೆ.

ಜೆ ಕೃಷ್ಣಮೂರ್ತಿ



ಒಂದು ಕೈಯಲ್ಲಿ ಬಂದೂಕು, ಮತ್ತೊಂದರಲ್ಲಿ ದೇವರು

ಧ್ಯಾನದಲ್ಲಿ ಮುಖ್ಯವಾದುದು ಮನಸ್ಸು ಮತ್ತು ಹೃದಯದ ಗುಣ. ನೀವೇನು ಸಾಧಿಸುತ್ತೀರಿ ಅದಲ್ಲ ಅಥವಾ ಏನು ಸಾಧಿಸಿದ್ದೇನೆ ಎಂದು ಹೇಳುತ್ತೀರೋ ಅದೂ ಅಲ್ಲ; ಮುಗ್ಧವಾದ ಮತ್ತು ಮಿಡಿಯುವ ಮನಸ್ಸಿನ ಗುಣ ಮುಖ್ಯ. ನಿರಾಕರಣದ ಮೂಲಕ ಸಕಾರಾತ್ಮಕ ಸ್ಥಿತಿ ಮೂಡುತ್ತದೆ. ಕೇವಲ ಶೇಖರಿಸುವುದು ಅಥವಾ ಬದುಕುವುದರಲ್ಲಿ ಅನುಭವವು ಧ್ಯಾನದ ಪರಿಶುದ್ಧತೆಯನ್ನು ನಿರಾಕರಿಸುತ್ತದೆ. ಧ್ಯಾನವು ಗುರಿಸಾಧನೆಯ ಮಾರ್ಗವಲ್ಲ, ಅದು ಗುರಿಯೂ ಹೌದು. ಮಾರ್ಗವೂ ಹೌದು. ಅನುಭವದ ಮುಖಾಂತರ ಮನಸ್ಸನ್ನು ಎಂದಿಗೂ ಮುಗ್ಧಗೊಳಿಸಲು ಸಾಧ್ಯವಿಲ್ಲ. ಅನುಭವದ ನಿರಾಕರಣದಿಂದ ಮಾತ್ರವೇ ಮುಗ್ಧತೆಯ ಧನಾತ್ಮಕ ಸ್ಥಿತಿ ಮೂಡುತ್ತದೆ. ಈ ಮುಗ್ಧತೆಯನ್ನು ಆಲೋಚನೆ ರೂಢಿಸುವುದಿಲ್ಲ. ಆಲೋಚನೆ ಎಂದಿಗೂ ಮುಗ್ಧವಲ್ಲ. ಧ್ಯಾನವು ಚಿಂತನೆಯನ್ನು ಕೊನೆಗೊಳಿಸುತ್ತದೆ; ಅದು ಧ್ಯಾನಿಯಿಂದಾಗುವುದಲ್ಲ. ಏಕೆಂದರೆ ಧ್ಯಾನಿಯೇ ಧ್ಯಾನ. ಧ್ಯಾನವಿಲ್ಲದಿದ್ದರೆ ನೀವು ಅಪಾರ ಬೆಳಕು, ಬಣ್ಣ ಹಾಗೂ ಚೆಲುವಿನಿಂದೊಡಗೂಡಿದ ಪ್ರಪಂಚದಲ್ಲಿರುವ ಕುರುಡನಂತೆ.

ಕಡಲ ಕಿನಾರೆಯಲ್ಲಿ ಅಲೆದಾಡಿ, ಈ ಧ್ಯಾನಸ್ಥ ಗುಣ ನಿಮ್ಮಲ್ಲಿ ಮೂಡಲಿ. ಹಾಗೆ ಆದರೆ, ಅದನ್ನು ಬೆಂಬತ್ತಬೇಡಿ. ನೀವು ಏನನ್ನು ಬೆಂಬತ್ತುತ್ತೀರೋ ಅದು ಏನಾಗಿತ್ತೋ ಅದರ ನೆನಪು. ಏನಾಗಿತ್ತು ಅದು 'ಏನಾಗಿದೆಯೋ' ಅದರ ಸಾವು. ಅಥವಾ ನೀವು ಬೆಟ್ಟ ಗುಡ್ಡಗಳಲ್ಲಿ ಅಲೆದಾಡುವಾಗ ಎಲ್ಲವೂ ಜೀವನದ ಚೆಲುವು ಹಾಗೂ ನೋವನ್ನು ನಿಮಗೆ ಹೇಳಲಿ ಆಗ ನೀವು ನಿಮ್ಮ ದುಃಖಕ್ಕೆ ಮತ್ತು ಅದನ್ನು ಕೊನೆಗೊಳಿಸುವುದಕ್ಕೆ ಎಚ್ಚರಗೊಳ್ಳುತ್ತೀರಿ. ಧ್ಯಾನವು ಕಂಡ, ಬೇರು, ಹೂ ಹಣ್ಣು; ಆದರೆ ಶಬ್ದಗಳು ಹಣ್ಣು, ಹೂವು, ಬೇರು, ನಾರು, ಗಿಡ ಇತ್ಯಾದಿಗಳನ್ನು ಬೇರ್ಪಡಿಸುತ್ತವೆ. ಈ ಬೇರ್ಪಡಿಸುವಿಕೆಯಲ್ಲಿ ಕ್ರಿಯೆ ಒಳ್ಳೆಯದನ್ನು ಸೃಷ್ಟಿಸುವುದಿಲ್ಲ. ಋಜುತ್ವವೆಂಬುದು ಒಟ್ಟು ಪರಿಭಾವನೆ.

ಅದು ಇಕ್ಕೆಲಗಳಲ್ಲಿ ಮರಗಳಿಂದ ಕಂಗೊಳಿಸುವ ನೆರಳು ಹಬ್ಬಿರುವ ನಿಡಿದಾದ ರಸ್ತೆ. ಹೊಳೆಯುವ, ಫಲಭರಿತ ಗೋಧಿ ತೆನೆಗಳಿಂದ ಸಮೃದ್ಧವಾದ ಹಸಿರು ಹೊಲಗಳ ನಡುವಿನಿಂದ ಸಾಗಿದ ಅಗಲ ಕಿರಿದಾದ ರಸ್ತೆ. ಬಿಸಿಲು ನೆರಳು. ರಸ್ತೆಯ ಇಕ್ಕೆಲಗಳಲ್ಲಿ ಹರಡಿದ ಕೊಳಕು ಹಳ್ಳಿಗಳು; ಒಪ್ಪ ಓರಣವಿಲ್ಲದ ಬಡತನ ಹೊದ್ದ ಹಳ್ಳಿಗಳು. ವಯಸ್ಸಾದವರು ರೋಗಗ್ರಸ್ತರಂತೆ ಖಿನ್ನರಾದವರಂತೆ ಕಂಡರು. ಮಕ್ಕಳು ಆ ಧೂಳಿನಲ್ಲಿ ಗಟ್ಟಿಯಾಗಿ ಕಿರುಚುತ್ತಾ ಆಟವಾಡುತ್ತಿದ್ದರು. ಮರಗಳ ಮೇಲಿರುವ ಹಕ್ಕಿಗಳತ್ತ ಕಲ್ಲು ಬೀರುತ್ತಿದ್ದರು. ಆಹ್ಲಾದಕರವಾದ ತಂಪಾದ ಮುಂಜಾನೆ, ಬೆಟ್ಟಗಳೆಡೆಯಿಂದ ತಾಜಾ ಗಾಳಿ ಬೀಸುತ್ತಿದೆ.

ಆ ಬೆಳಗ್ಗೆ, ಗಿಳಿಗಳು, ಮೈನಾಗಳು ಭಾರಿ ಸದ್ದು ಮಾಡುತ್ತಿದ್ದವು. ಮರಗಳ ಹಸಿರೆಲೆಗಳ ನಡುವೆ ಹುದುಗಿರುವ ಗಿಳಿಗಳನ್ನು ನೋಡುವುದು ದುಸ್ತರ.

ಹುಣಿಸೆ ಮರದ ಪೊಟರೆಗಳಲ್ಲಿ ಅವು ವಾಸವಾಗಿದ್ದುವು. ಅವು ಕಿಚಕಿಚ ಸದ್ದು ಮಾಡುತ್ತಾ ಅಡ್ಡಾದಿಡ್ಡಿ ಹಾರಾಡುತ್ತಿದ್ದವು. ನೆಲದ ಮೇಲಿರುವ ಮೈನಾಗಳು ಸಾಧು ಪಕ್ಷಿಗಳು. ನೀವು ಅವುಗಳ ತೀರ ಸಮೀಪಕ್ಕೆ ಹೋಗಬಹುದು. ಇನ್ನೇನು ಮುಟ್ಟಬೇಕು ಅನ್ನುವಷ್ಟರೊಳಗೆ ಅವು ಹಾರಿಹೋಗುತ್ತವೆ. ಹಸಿರು ಮತ್ತು ಚಿನ್ನದ ಬಣ್ಣದ ಕೀಟಭಕ್ಷಕ ಹಕ್ಕಿ ಟೆಲಿಫೋನ್ ತಂತಿಗಳ ಮೇಲಿತ್ತು. ಅದೊಂದು ಸೂರ್ಯನ ತಾಪ ಇನ್ನೂ ಏರಿರದ ಸುಂದರ ಬೆಳಗು. ವಾತಾವರಣದಲ್ಲಿ ಕೃಪಾಶೀರ್ವಾದ ಇತ್ತು. ಮನುಷ್ಯ ಜಾಗೃತಗೊಳ್ಳುವುದಕ್ಕೆ ಮೊದಲಿನ ಶಾಂತಿ ಅಲ್ಲಿತ್ತು.

ರಸ್ತೆಯಲ್ಲಿ ಒಂದು ಕುದುರೆಗಾಡಿ ಹೋಗುತ್ತಿದೆ. ಅದಕ್ಕೆ ಎರಡು ಚಕ್ರಗಳು. ನಾಲ್ಕು ಕಂಬಗಳ ಮೇಲಿರುವ ವೇದಿಕೆ. ಮೇಲೆ ಒಂದು ಹೊದಿಕೆ. ಅದರಲ್ಲಿ ಗಾಲಿಗಳ ಮೇಲೆ ಇರಿಸಿದ ಬಿಳಿ ಹಾಗೂ ಕೆಂಪು ಬಟ್ಟೆ ಹೊದಿಸಿದ ಒಂದು ಶವ. ದಹನ ಕ್ರಿಯೆಗಾಗಿ ಅದನ್ನು ಹೊಳೆಯ ಬುಡಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಗಾಡಿ ಸವಾರನ ಪಕ್ಕದಲ್ಲಿ ಬಹುಶಃ ಸತ್ತ ವ್ಯಕ್ತಿಯ ಸಂಬಂಧಿಕನೊಬ್ಬ ಕುಳಿತಿದ್ದಾನೆ. ಆ ಏರುತಗ್ಗುಗಳ ರಸ್ತೆಯಲ್ಲಿ ಗಾಡಿ ಹೋಗುವಾಗ ಹೆಣ ಮೇಲೆ ಕೆಳಗಾಗುತ್ತಿದೆ. ಬಹುಶಃ ಅವರು ದೂರದಿಂದ ಬಂದಿರಬೇಕು; ಏಕೆಂದರೆ ಕುದುರೆ ಬೆವರುತ್ತಿದೆ. ಹೆಣ ಕುಲುಕಾಡುತ್ತಿದೆ. ಎಲ್ಲ ಯಾಕೋ ಗಂಭೀರವಾಗಿದೆ ಅನ್ನಿಸಿತು.

ಆ ದಿವಸ ಆಮೇಲೆ ನಮ್ಮನ್ನು ಕಾಣಲು ಬಂದ ವ್ಯಕ್ತಿ ತಾನು ನೌಕಾದಳದಲ್ಲಿ ಫಿರಂಗಿ ವಿದ್ಯೆ ಕಲಿಸುವ ಶಿಕ್ಷಕ ಎಂದು ಹೇಳಿದ. ತನ್ನ ಹೆಂಡತಿ ಮತ್ತು ಇಬ್ಬರು ಮಕ್ಕಳ ಜತೆಗೆ ಬಂದಿದ್ದ ಆತ ತುಂಬಾ ಗಂಭೀರ ವ್ಯಕ್ತಿಯ ಹಾಗೆ ಕಂಡ. ಪರಸ್ಪರ ಗೌರವವಂದನೆ ವಿನಿಮಯದ ಬಳಿಕ ತನಗೆ ದೇವರನ್ನು ಕಾಣಬೇಕು ಎಂದು ಹೇಳಿದ. ಬಹುಶಃ ಅವನಿಗೆ ಸಂಕೋಚವಿರಬೇಕು, ಹಾಗಾಗಿ ಸ್ಪಷ್ಟವಾಗಿ ಮಾತನಾಡುತ್ತಿರಲಿಲ್ಲ. ಮುಖ ಹಾಗೂ

ಕೈಗಳನ್ನು ಗಮನಿಸಿದರೆ ಸಮರ್ಥ ಎಂದು ಹೇಳಬಹುದಿತ್ತು. ಅವನ ಧ್ವನಿ ಹಾಗೂ ನೋಟ ಗಡುಸಾಗಿತ್ತು. ಎಷ್ಟಾದರೂ ಆತ ಕೊಲ್ಲುವ ಬಗೆಗಳನ್ನು ಹೇಳಿಕೊಡುವ ಶಿಕ್ಷಕ. ಅವನ ದೈನಂದಿನ ಚಟುವಟಿಕೆಗಳಿಂದಾಗಿ ದೇವರು ಅವನಿಗೆ ಬಲುದೂರದ ವಿಷಯವಾಗಿರಬೇಕು. ಇದೆಲ್ಲ ವಿಲಕ್ಷಣ ಅನ್ನಿಸಿತು. ಏಕೆಂದರೆ ತಾನು ನಿಜಕ್ಕೂ ದೇವರ ಹುಡುಕಾಟದಲ್ಲಿ ಪ್ರಾಮಾಣಿಕನಾಗಿದ್ದೇನೆ, ಆದರೆ ಜೀವನೋಪಾಯಕ್ಕಾಗಿ ಕೊಲ್ಲುವ ಕಲೆಯನ್ನು ಹೇಳಿಕೊಡಬೇಕಾಗಿ ಬಂದಿದೆ ಎಂದು ಹೇಳಿದ.

ತಾನೋರ್ವ ಧರ್ಮನಿಷ್ಠ ವ್ಯಕ್ತಿ. ವಿವಿಧ ಶಾಖೆಗಳಿಗೆ ಸೇರಿದ ಹತ್ತಾರು ಸಾಧು ಸಂತರನ್ನು ಹುಡುಕಿಕೊಂಡು ಹೋಗಿದ್ದೇನೆ ಎಂದು ಹೇಳಿದ. ಅವನಿಗೆ ಅವರಿಂದ ಸಮಾಧಾನ ಸಿಗಲಿಲ್ಲ. ನಾವು ಮಾನವರು ಹಾಗೂ ಸಂತರು ಅರಸಿದ ಆ ಒಂದು ವಿಚಿತ್ರ ಪ್ರಪಂಚವನ್ನು ಒಲಿಸಿಕೊಳ್ಳುವುದು ಹೇಗೆ ಎಂದು ಅವನಿಗೆ ತಿಳಿಯುವ ತವಕ.

ಅದಕ್ಕೆಂದೇ ಅವನು ನಮ್ಮನ್ನು ನೋಡಲು ಟ್ರೈನು ಹಾಗೂ ಬಸ್‌ನಲ್ಲಿ ಪ್ರಯಾಣಿಸಿ ಬಲುದೂರದಿಂದ ಬಂದಿದ್ದ. ಅವನ ಹೆಂಡತಿ ಮಕ್ಕಳು ಮೌನವಾಗಿ ಸಭ್ಯರಾಗಿ ಕುಳಿತಿದ್ದರು. ಕಿಟಕಿಯ ಹೊರಗಿನ ಮರದ ರೆಂಬೆಯ ಮೇಲೆ ಒಂದು ತೆಳುಕಂದು ಬಣ್ಣದ ಪಾರಿವಾಳ ಮೆತ್ತಗೆ ಗುರುಗುಟ್ಟುತ್ತ ಕುಳಿತಿದೆ. ಬಂದ ವ್ಯಕ್ತಿ ಅದನ್ನು ನೋಡಲೇ ಇಲ್ಲ. ತಾಯಿಯ ಜತೆಗಿರುವಆ ಮಕ್ಕಳ ಮುಖದಲ್ಲಿ ನಗುವಿಲ್ಲ, ಸಂಕೋಚದಿಂದ ಬಿಗಿಯಾಗಿ ಕುಳಿತಿವೆ.

ನೀವು ದೇವರನ್ನು ಕಾಣಲಾರಿರಿ; ಕಾಣುವುದಕ್ಕೆ ದಾರಿಗಳಿಲ್ಲ. ಮನುಷ್ಯ ಹಲವು ಮಾರ್ಗಗಳನ್ನು, ಹಲವು ಧರ್ಮಗಳನ್ನು, ಹಲವು ನಂಬಿಕೆಗಳನ್ನು, ಉದ್ಧಾರಕರನ್ನು, ಗುರುಗಳನ್ನು ಆವಿಷ್ಕರಿಸಿದ್ದಾನೆ. ಇದೆಲ್ಲ, ಇವರೆಲ್ಲ ಮಾಸದ ಆ ಪರಮಾನಂದವನ್ನು ಕಂಡುಕೊಳ್ಳಲು ನೆರವಾಗಬಹುದು ಎಂದು ಭಾವಿಸಿದ್ದೇನೆ. ದುಃಖವೇ ಮನಸ್ಸಿನ ಭ್ರಮೆಗಳಿಗೆಕಾರಣವಾಗುತ್ತದೆ. ಅದು ಹುಡುಕಾಟದ ಒಂದು ದರ್ಶನದ ಕಡೆಗೆ ಕೊಂಡೊಯ್ಯುತ್ತದೆ. ಆ ಭ್ರಮೆ, ದರ್ಶನ ಮನಸ್ಸಿಗೆ ತಿಳಿದಿರುವ ಸಂಗತಿಗಳಿಂದ ಹುಟ್ಟಿಕೊಂಡ ಪ್ರಕ್ಷೇಪಣೆ. ಆ ವ್ಯಕ್ತಿಯ ಜೀವನ ವಿಧಾನದಿಂದ ಅವನು ಅರಸುತ್ತಿರುವ ಒಲವು ನಾಶವಾಗಿದೆ. ನೀವು ಒಂದು ಕೈಯಲ್ಲಿ ಬಂದೂಕು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ದೇವರನ್ನು ಹಿಡಿದುಕೊಳ್ಳಲಾರಿರಿ. ದೇವರು ಒಂದು ಸಂಕೇತ, ಶಬ್ದ, ಅದು ನಿಜಕ್ಕೂ ತನ್ನ ಅರ್ಥ ಕಳೆದುಕೊಂಡಿದೆ. ಏಕೆಂದರೆ ಇಗರ್ಜಿಗಳು ಹಾಗೂ ಶ್ರದ್ಧಾ ಕೇಂದ್ರಗಳು ಅದನ್ನು ನಾಶ ಮಾಡಿವೆ. ನಿಮಗೆ ದೇವರಲ್ಲಿ ನಂಬಿಕೆ ಇಲ್ಲದಿದ್ದರೆ ನೀವು ಆಸ್ತಿಕನ ಹಾಗೆ; ಏಕೆಂದರೆ ಇಬ್ಬರೂ ಈ ಕ್ಷಣಿಕವಾದ ನಿರರ್ಥಕವಾದ ಬದುಕಿನ ನೋವನ್ನು ಅನುಭವಿಸುತ್ತೀರಿ; ಈ ನಿತ್ಯ ಜೀವನದ ಕಹಿಯಿಂದಾಗಿ ಬದುಕು ಅರ್ಥಹೀನವಾಗುತ್ತದೆ.

---

*ಮೂಲ: **The Only Revolution***
ಕೃತಿ : ನಿಜವಾದ ಕ್ರಾಂತಿ (ಅಧ್ಯಾಯ ೨)
ಅನುವಾದ : ಡಾ. ಮಹಾಬಲೇಶ್ವರ ರಾವ್

Study Retreat 2023: JUN-OCT

- Aug 18-20 : What is 'Holistic Education'?
  (2-Day weekend program - Fri 7.30pm - Sun 5.30pm)
- Sept 7-10 : Understanding 'Emotions' - Hurt, Frustration & Anger
  (3-Day weekend program-Thurs 7.30 pm - Sun 5 pm)
- Oct 06-08 :What does it mean to be a 'Responsible Parent'?
  (2-Day weekend program - Fri 7.30pm - Sun 5.30pm)

ಸಹಅಧ್ಯಯನ ಶಿಬಿರ-೧೫ ರಿಂದ ೧೭ ಸೆಪ್ಟೆಂಬರ್ ೨೦೨೩

ವಿಷಯ : "ಅನುಬಂಧಿತ ಮನಸು ಬಿಡುಗಡೆ ಹೊಂದಬಹುದೆ?"

ಈ ಮೂರುದಿನಗಳ ಶಿಬಿರದ ಆಶಯವು ಜೆ ಕೃಷ್ಣಮೂರ್ತಿಯವರ ಬೋಧನೆಗಳ ಬೆಳಕಿನಲ್ಲಿ **"ಅನುಬಂಧಿತ ಮನಸು ಬಿಡುಗಡೆ ಹೊಂದಬಹುದೆ?"**ವಿಷಯವನ್ನು ಸ್ವಾಧ್ಯಾಯ ಹಾಗೂ ಸಹ-ಅಧ್ಯಯನ ಚಟುವಟಿಕೆಗಳ ಮೂಲಕ ಶೋಧಿಸುವುದಾಗಿದೆ.ಈ ಶಿಬಿರವು ನೂರು ಎಕರೆ ವಿಸ್ತೀರ್ಣದ ಸೊಂಪಾದ ಹಸಿರು ವನದ ನೈಸರ್ಗಿಕ ಸೌಂದರ್ಯ ಹಾಗೂ ಪ್ರಶಾಂತ ಮೌನದ ವಾತಾವರಣದಲ್ಲಿನೆರವೇರುತ್ತದೆ.ಈ ಶಿಬಿರದ ಎಲ್ಲಾ ಚಟುವಟಿಕೆಗಳು ಮತ್ತು ಸಂವಾದಗಳು ಕನ್ನಡದಲ್ಲಿ ನಡೆಯಲಿವೆ.

ದೂರವಾಣಿ: 9972995800

ಮಿಂಚಂಚೆ: kfistudy@gmail.com



ನಾವು ಅನೇಕ ಪುಸ್ತಕಗಳನ್ನು ಓದುತ್ತೇವೆ; ಅನೇಕ ವಸ್ತು ಸಂಗ್ರಹಾಲಯಗಳಿಗೆ ಹೋಗಿ ಬರುತ್ತೇವೆ. ಸಂಗೀತ ಕಛೇರಿಗಳಲ್ಲಿ ಕುಳಿತು ಕೇಳುತ್ತೇವೆ. ಟೆಲಿವಿಷನ್ನನ್ನು ನೋಡುತ್ತೇವೆ,ಹೀಗೆಯೇ ಇತರ ಅನೇಕ ಮನರಂಜನೆಗಳನ್ನು ಪಡೆಯುತ್ತೇವೆ. ಇತರ ಜನರ ಭಾವನೆಗಳನ್ನು ಎತ್ತಿ ನುಡಿಯುತ್ತೇವೆ. ಕಲೆಯ ಬಗ್ಗೆ ಬೇಕಾದಷ್ಟು ಯೋಚಿಸುತ್ತೇವೆ, ಮಾತನಾಡುತ್ತೇವೆ. ನಾವು ಕಲೆಯನ್ನು ಏಕೆ ಇಷ್ಟೊಂದು ಅವಲಂಬಿಸುತ್ತೇವೆ? ನೀವು ಪ್ರಕೃತಿಯೊಡನೆ ನೇರವಾಗಿ ಸಂಬಂಧ ಹೊಂದಿದ್ದರೆ, ರೆಕ್ಕೆಗಳ ಮೇಲೆ ಹಾರುತ್ತಿರುವ ಪಕ್ಷಿಯ ಚಲನೆಯನ್ನು ನೋಡಿದರೆ, ಆಕಾಶದಲ್ಲಿನ ಎಲ್ಲ ವಿಕಸನ ಪರಂಪರೆಯ ಸೌಂದರ್ಯವನ್ನು ಬೆಟ್ಟಗಳ ಮೇಲಿನ ನೆರಳುಗಳನ್ನು ಮತ್ತೊಬ್ಬರ ಮುಖದ ಮೇಲಿನ ಸೌಂದರ್ಯವನ್ನು ನೋಡಿದರೆ, ನಿಮಗೆ ಯಾವುದೋ ವಸ್ತುಸಂಗ್ರಹಾಲಯದಲ್ಲಿ ಒಂದು ಚಿತ್ರವನ್ನು ನೋಡಬೇಕು ಎನ್ನಿಸುತ್ತದೆಯೆ?

ಜೆ.ಕೃಷ್ಣಮೂರ್ತಿ

ಹೊಸ ಪುಸ್ತಕಗಳ ಪ್ರಕಟಣೆ: 2023

ಈ ಹೊಸ ಪುಸ್ತಕಗಳು ವಸಂತ ಪ್ರಕಾಶನ ಹಾಗು ಎಲ್ಲಾ ಪ್ರಸ್ತುತ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿರುತ್ತವೆ.ತಿಂಗಳ ಮೊದಲ ಭಾನುವಾರದ ಸಂವಾದ ಸಭೆಯ ಬಳಿಕಶಾಲಾ ಆವರಣದಲ್ಲಿ ಹಾಗೂ ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಲ್ಲಿಕೃತಿಗಳುಲಭ್ಯವಿರುತ್ತವೆ.



Leaving School Entering life



Krishnamurti to Himself



What are you doing with your Life

ಪ್ರಸ್ತುತಅನುವಾದಿತ ಕೃತಿಗಳು:

What are you doing with your Life, Krishnamurti to Himself and Leaving School Entering life.

Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 8317419451
Email: kfistudy@gmail.com
Website: www.kfistudy.org

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್.ನಾಗಭೂಷಣಸ್ವಾಮಿ
ಡಾ|| ವನಮಾಲಾ ವಿಶ್ವನಾಥ್